ಶ್ರೀ ಎಸ್.ಎಸ್. ಅರಕೇರಿ.—ತುಂಬಾ ಸಂತೋಷ. ನನ್ನ (ಉ) ಪ್ರಶ್ನೆಗೆ ಉತ್ತರವಾಗಿ ಬೋಧಕ ವರ್ಗದವರು ೯ಳ ಮತ್ತು ಬೋಧಕೇತರ ವರ್ಗದವರು ೫ಳ ಮಂದಿ ಎಂದು ಹೇಳಿದ್ದಾರೆ. ಆ ಪೈಕಿ ಬೋಧಕ ವರ್ಗದಲ್ಲಿ ಒಬ್ಬನೇ ಒಬ್ಬ ಪೆಡ್ಯೂಲ್ಡ್ ಕ್ಯಾಸ್ಟಿನವರಿದ್ದಾರೆ, ಪೆಡ್ಯೂಲ್ಡ್ ಟ್ರೈಬ್ ನವರು ಇಲ್ಲವೇ ಇಲ್ಲ. ಬೋಧಕೇತರ ವರ್ಗದಲ್ಲಿ ೧೧ ಮಂದಿ ಹರಿಜನರು ಮತ್ತು ಒಬ್ಬರು ಗಿರಿಜನರು ಇದ್ದಾರೆ. ಹೀಗೆ ಅತ್ಯಂತ ಕೆಳಮಟ್ಟದ ಪ್ರಮಾಣದಲ್ಲಿ ಬೋಧಕ ಮತ್ತು ಬೋಧಕೇತರ ವರ್ಗದಲ್ಲಿರುವುದರಿಂದ ಸರ್ಕಾರದ ಧೋರಣೆ ಪ್ರಕಾರ ೧೮ ಪರ್ಸೆಂಟನ್ನು ಪೆಯಿಂಟೇನ್ ಮಾಡುವುದಕ್ಕೆ ಮಾನ್ಯ ಸಚಿವರು ಏಕೆ ಆದೇಶ ಕೊಟ್ಟಿಲ್ಲ? ಯಾವಾಗ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ರೋಸ್ಟರ್ ಸಿಸ್ಟಂ ಅನ್ನು ಜಾರಿಗೆ ತಂದದ್ದು ೧೯೭೯ರಲ್ಲಿ. ಇತ್ತೀಚೆಗೆ ಪ್ರಾರಂಭವಾದ ಶಾಲೆಗಳಲ್ಲಿ ಟೀಚರ್ಸ್‌ಗೆ ಅಪ್ರೂವಲ್ ಕೊಡಬೇಕಾದರೆ ರೋಸ್ಟರ್ ಸಿಸ್ಟಂ ಅನ್ನು ಇನ್‌ಸಿಸ್ಟ್ ಮಾಡುತ್ತೇವೆ. ಅವರು ಪರ್ಸೆಂಟೇಜ್ ಪ್ರಕಾರ ಸಾಕಷ್ಟು ಹರಿಜನ-ಗಿರಿಜನರನ್ನು ತೆಗೆದುಕೊಳ್ಳದಿದ್ದರೆ ಅಪ್ರೂವಲ್ ಕೊಡುವುದಿಲ್ಲ. ಆದರೆ ೧೯೭೯ಕ್ಕೆ ಮುಂಚೆ ಪ್ರಾರಂಭವಾದ ಶಾಲೆಗಳಲ್ಲಿ ಸಾಕಷ್ಟು ಮಂದಿ ಹರಿಜನ-ಗಿರಿಜನರನ್ನು ತೆಗೆದುಕೊಳ್ಳದಿರುವುದರಿಂದ ಹಾಗಾಗಿದೆ. ಇತ್ತೀಚೆಗೆ ನಿವೃತ್ತರಾದವರ ಜಾಗಗಳಿಗೆ ಮತ್ತು ಮರಣ ಹೊಂದಿದವರ ಜಾಗಗಳಿಗೆ ಹುದ್ದೆಗಳ ಆಧಾರದ ಮೇಲೆ ೧೮ ಪರ್ಸೆಂಟ್ ಮುಟ್ಟುವಷ್ಟು ಹರಿಜನ-ಗಿರಿಜನ ಅಭ್ಯರ್ಥಿಗಳನ್ನು ತೆಗೆದು ಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಅರಕೇರಿ.—ಬಹಳ ಸಂತೋಷ, ಅದಕ್ಕಾಗಿ ಧನ್ಯವಾದಗಳು.

Distribution of land to the displaced persons from Madahalli Plantation Area.

207 SRI JAYADEVARAJ URS (Chamundeshwari).—Will the Minister for Revenue be pleased to state.

(a) whether the land has been distributed to all the displaced persons from Madahalli Plantation Area of Mysore taluk ;

(b) if so. the total No. of persons rehabilitated ;

(c) number of persons who have been displaced form the Forest Area ;

(d) whether all of them have been provided with lands ?

SRI MALLIKARJUNA M. KHARGE (Minister for Revenue).—

(a) Yes.

(b) 30 persons.

(c) 30 persons.

(d) All the 30 persons have been granted land at the rate of 3-00 acres each in S. No. 186 of Doddamaragowdanahalli and Saguvali Chits have also been issued to all the grantees.

ಶ್ರೀ ಡಿ. ಜಯದೇವರಾಜ ಅರಸ್ – ಮಾನ್ಯ ಅಧ್ಯಕ್ಷರೆ, ಮೈಸೂರು ತಾಲ್ಲೂಕಿನ ಮಡಹಳ್ಳಿ ತೋಪಿನ ನಿರ್ವಸಿತರಲ್ಲಿ ಪುನರ್ವಸತಿ ಹೊಂದಿದವರ ಸಂಖ್ಯೆ ೩೦ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿದೆ. ೩೩ ಜನರ ಪೈಕಿ ೩೦ ಜನರಿಗೆ ಮಾತ್ರ ಜಮೀನು ಕೊಡಲಾಗಿದೆ. ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದರೂ ಕೂಡ ಜಾಗ ತೋರಿಸಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮ್ಮಲ್ಲಿರತಕ್ಕ ವರದಿ ಪ್ರಕಾರ ೩೦ ಜನರು ಎನ್‌ಕ್ರೋಚ್

ಮಾಡಿದ್ದು ಪ್ರತಿಯೋಬ್ಬರಿಗೂ ಮೂರು ಎಕರೆಯಂತೆ ಸರ್ವೆ ನಂಬರ್ ೧೮೬ ರಲ್ಲಿ ಜಮೀನು ಕೊಟ್ಟಿದ್ದೇವೆ.

ಶ್ರೀ ಡಿ. ಜಯದೇವರಾಜ ಅರಸ್.—ಜಮೀನು ಕೊಟ್ಟಿದ್ದೀರಿ, ಆ ಜನರಿಗೆ ಸಾಗುವಳಿ ಚೀಟಿಯನ್ನೂ ಹಂಚಿದೆ. ಆದರೆ ಇವತ್ತಿನವರೆಗೂ ಜಾಗವನ್ನು ತೋರಿಸಿಲ್ಲ. ಯಾರು ಎಲ್ಲಿ ಹೋಗಬೇಕು ಎಂಬ ಬಗ್ಗೆ ಕಲ್ಲು ಹಾಕಿ ಜಾಗ ನಮೂದು ಮಾಡಿಲ್ಲ. ಹರಿಜನರಿಗೆ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು ಗುಡ್ಡೆ ಇರುವ ಜಮೀನನ್ನು ಕೊಟುವುದಕ್ಕೆ ಕೊಡ ಪ್ರಯತ್ನ ಪಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಆ ಜನರಿಗೆ ಜಾಗವನ್ನು ಕೊಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಇದನ್ನು ನನ್ನ ಗಮನಕ್ಕೆ ತರಬಹುದಾಗಿತ್ತು. ನನ್ನ ಗಮನಕ್ಕೆ ತಂದಿದ್ದರೆ ತಕ್ಷಣ ಡೆಪ್ಯುಟಿ ಕಮಿಷನರ್‌ಗೆ ಫೋನ್ ಮಾಡಿ ಹೇಳುತ್ತಿದ್ದೆ. ಇದನ್ನು ಅಸೆಂಬ್ಲಿಯಲ್ಲಿ ತರುವ ಅವಶ್ಯಕತೆ ಇರಲಿಲ್ಲ. ಒಟ್ಟಿನಲ್ಲಿ ಈಗ ಗಮನಕ್ಕೆ ತಂದಿದ್ದಾರೆ. ನಾನು ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ಗೆ ಹೇಳಿ ಪೊಸಿಷನ್ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಈ ೩೦ ಜನರಲ್ಲದೆ ಇನ್ನೂ ೧೬ ಜನ ನಿರ್ವಸಿತರಿದ್ದಾರೆ. ಅವರಲ್ಲಿ ಯಾರಿಗೆ ಜಮೀನಿಲ್ಲವೋ ಅಂಥವರಿಗೆ ಜಮೀನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮ್ಮಲ್ಲಿರತಕ್ಕ ವರದಿ ಪ್ರಕಾರ ೩೦ ಜನ ಅರಣ್ಯ ಪ್ರದೇಶದಲ್ಲಿ ಎನ್‌ಕ್ರೋಚ್ ಮಾಡಿದ್ದರು. ಅವರು ರಿಹ್ಯಾಬಿಲಿಟೇಟ್ ಮಾಡಬೇಕೆಂದು ಕೇಳಿಕೊಂಡಾಗ ೩೦ ಜನರಿಗೆ ಸರ್ವೆ ನಂಬರ್ ೧೮೬ ರಲ್ಲಿ ಮೂರು ಎಕರೆಯಂತೆ ಸಾಗುವಳಿ ಚೀಟಿ ಕೊಟ್ಟು, ಜಮೀನು ಗ್ರಾಂಟ್ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನೂ ೧೬ ಜನರು ಇದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನು ಬೇಕಾದರೆ ಪರಿಶೀಲಿಸಿ ಯಾರಿಗೆ ಕೊಡಬೇಕೋ ನೋಡಿ ಬೇರೆ ಕಡೆ ಎಲ್ಲಾದರೂ ಇದ್ದರೆ ಕೊಡುವ ವ್ಯವಸ್ಥೆ ಮಾಡುತ್ತೇವೆ.

Accommodation for Tailoring Ciasses in Polytechnic, Hassan.

92 SRI C. M. ARUMUGHAM (K. G. F.).—Will the Minister for Education be pleased to state.

(a) is it not a fact that Tailoring Classes are being held in the Polytechnic building at Hassan Town ;

(b) the area on which the building stands and the the cost of the building ;

(c) whether it is a fact that the Hassan Municipality offered Rs. 20,00 lakhs for the building ;

(d) whether it is not a fact thahe Government has offered a building to a Private Party to run w College

(e) whether there was any public and student's agitation over this proposal ?

SRI G. B. SHANKAR RAO (Minister for Education).—

(a) No.

(b) The area of the site is 41,772 Sq. ft. The plinth area of building is 10.264 Sq.ft. and the capital cost of building is Rs. 29,000.

(c) No.